ದಿನಾಂಕ 02-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ ಎಂ.ಡಬ್ಲ್ಯು, ಪರವಾಗಿ ಕು. ಆರ್.ಪಿ.ಎನ್., ವಕೀಲರವರಿಂದಃ

ಮೃತ ನನ್ನ ಮಗ ಎದುರುದಾರನ ಬಳಿ ಬೋಟಿನಲ್ಲಿ ಬಲೆ ಹಾಕುವ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ದಾಖಲೆ ಇದೆ, ಹಾಜರು ಮಾಡಬಹುದು. ನನ್ನ ಮಗ ಮೃತ ಪಡುವ ಕಾಲಕ್ಕೆ ಎದುರುದಾರನ ಬೋಟಿನಲ್ಲಿ ಕೆಲಸ ಮಾಡುತ್ತಿದ್ದ. ಯಾವ ದಿನಾಂಕದಂದು ನನ್ನ ಮಗ ಬೋಟಿನಲ್ಲಿ ಕೆಲಸಕ್ಕೆ ಹೋಗಿದ್ದ ನನಗೆ ನೆನಪಿಲ್ಲ. ನನ್ನ ಮಗ ಕೆಲಸ ಮಾಡುತ್ತಿದ್ದ ಬೋಟಿನ ಹೆಸರು ನನಗೆ ಗೊತ್ತಿಲ್ಲ. ಸದರಿ ಬೋಟಿನ ಮಾಲೀಕ ಯಾರು ನನಗೆ ಗೊತ್ತು . ಅನಿಲ್ ಸಾಹುಕಾರ. ಸದರಿ ಅನಿಲ್ ಸದರಿ ಬೋಟಿನ ಮಾಲೀಕ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಬೋಟಿಗೆ ಸಂಬಂದಿಸಿದಂತೆ ಆರ್.ಸಿ ದಾಖಲೆ ಇರುತ್ತದೆ. ಸದರಿ ಆರ್.ಸಿ ದಾಖಲೆ ಸಂಬಂದಪಟ್ಟ ಮೀನುಗಾರಿಕಾ ಇಲಾಖೆಯಿಂದ ಪಡೆದು ಹಾಜರು ಮಾಡಬಹುದು. ಸದರಿ ದಾಖಲೆ ಹಾಜರು ಮಾಡಿದಲ್ಲಿ ಬೋಟಿನ ಮಾಲೀಕ ಯಾರು ಎಂಬ ಬಗ್ಗೆ ಕಂಡು ಬರುತ್ತದೆ. ಅನಿಲ್ ಸಾಲಿಯಾನ್ ನನ್ನ ಮಗ ಕೆಲಸ ಮಾಡುತ್ತಿದ್ದ ಎಂದು ಹೇಳುವ ಬೋಟಿನ ಮಾಲೀಕನೇ ಅಲ್ಲ ಎಂದರೆ ಸರಿಯಲ್ಲ. ಘಟನೆ ನಡೆದಿತ್ತು ಎಂದು ಹೇಳುವ ಬೋಟಿಗೆ ವಿಮೆ ಇರುತ್ತದಾ ಇಲ್ಲವಾ ನನಗೆ ಗೊತ್ತಿಲ್ಲ.

2. ನನ್ನ ಮಗನ ಮರಣಕ್ಕೆ ಸಂಬಂದಿಸಿದಂತೆ ವಿಮಾ ಸಂಸ್ಥೆಯಿಂದ ಹಣ ಪಡೆದುಕೊಳ್ಳಲಾಗಿರುತ್ತದೆ. ಎಷ್ಟು ಹಣ ವಿಮಾ ಸಂಸ್ಥೆಯಿಂದ ಪಡೆದುಕೊಳ್ಳಲಾಗಿದೆ ಎಂದರೆ, ನಾನು ಪಡೆದುಕೊಂಡಿಲ್ಲ. ನನ್ನ ಮಗನ ಮರಣಕ್ಕೆ ಸಂಬಂದಿಸಿದಂತೆ ಮೀನುಗಾರಿಕಾ ಸಂಸ್ಥೆಯಿಂದ ಹಣ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಮಗ ಬೋಟಿನಲ್ಲಿ ಕೆಲಸ ಮಾಡುವ ಕಾಲಕ್ಕೆ ಮೃತ ಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

3. ನನ್ನ ಮಗನಿಗೆ ಮಧ್ಯಪಾನದ ಅಭ್ಯಾಸ ಇತ್ತು. ಸಾಮಾನ್ಯವಾಗಿ ಬೋಟನ್ನು ಮೇಲೆ ತರುವಾಗ ಎರಡು ದಂಡೆ ಇಡುವ ಕ್ರಮ. ಮೃತ ನನ್ನ ಮಗ ಮಧ್ಯಪಾನ ಮಾಡಿದ್ದು, ಬೋಟನ್ನು ಮೇಲೆ ತರುವಾಗ ಇಟ್ಟ ದಂಡೆಯನ್ನು ಎಡವಿ ಬಿದ್ದದ್ದು ಎಂದರೆ ಸರಿಯಲ್ಲ. ಸಾಕ್ಷಿ ಬಲೆ ಹಾಕುವಾಗ ಬಿದ್ದು ಮೃತಪಟ್ಟಿದ್ದು ಎಂದು ಸ್ವತಃ ನುಡಿಯುತ್ತಾರೆ. ನನ್ನ ಮಗ ಬಲೆ ನೀರಿನಲ್ಲಿ ಹಾಕುವಾಗ

ಸಮುದ್ರದಲ್ಲೇ ಬೋಟಿನ ಒಳಗೆ ಬಿದ್ದದ್ದು. ಮೃತ ನನ್ನ ಮಗ ಸಮುದ್ರದ ನೀರಿನ ಒಳಗೆ ಬಿದ್ದು ಮರಣ ಹೊಂದಿದ್ದು. ನನ್ನ ಮಗ ಬೋಟಿನಲ್ಲಿ ಇದ್ದಾಗ ಮರಣ ಹೊಂದ್ದಿದಲ್ಲ , ಆತ ಸಾರಾಯಿ ಕುಡಿದು ದಂಡೆ ಎಡವಿ ಬಿದ್ದದ್ದು ಎಂದರೆ ಸರಿಯಲ್ಲ.

4. ನನ್ನ ಮಗ ಕೆಲಸ ಮಾಡುತ್ತಿದ್ದ ಎಂದು ಹೇಳುವ ಬೋಟಿಗೆ ವಿಮೆ ಇದ್ದು, ಸದರಿ ವಿಮಾ ಸಂಸ್ಥೆಯನ್ನು ಪಕ್ಷಗಾರರನ್ನಾಗಿ ಮಾಡದೇ ಇರಲು ಯಾವುದೇ ಕಾರಣ ಇಲ್ಲ. ಎದುರುದಾರ ಮತ್ತು ಮೃತನ ನಡುವೆ ಯಾವುದೇ ಮಾಲೀಕ ಕಾರ್ಮಿಕ ಸಂಬಂದ ಇಲ್ಲ, ಕಾರಣ ಯಾವುದೇ ಪರಿಹಾರ ಎದುರುದಾರ ನೀಡಲು ಬಾಧ್ಯಸ್ತರನಲ್ಲ, ಯಾವುದೇ ಪರಿಹಾರ ಪಡೆಯಬೇಕಿದ್ದರೂ ವಿಮಾ ಸಂಸ್ಥೆ ಮತ್ತು ಘಟನೆ ನಡೆದಿತ್ತು ಎಂದು ಹೇಳುವ ಬೋಟಿನ ಮಾಲೀಕ ನೀಡಲು ಬಾಧ್ಯಸ್ಥ, ಕಾರಣ ಸದರಿ ಬೋಟಿನ ಮಾಲೀಕ ಎದುರುದಾರ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಈಗಾಗಲೇ ಮಿನುಗಾರಿಕಾ ಇಲಾಖೆಯಿಂದ ನನ್ನ ಮಗನ ಮರಣಕ್ಕೆ ಸಂಬಂದಿಸಿದಂತೆ ಹಣ ಪಡೆದುಕೊಂಡಿದ್ದು ಕಾರಣ ವಿಮಾ ಸಂಸ್ಥೆಯನ್ನು ಪಕ್ಷಗಾರನನ್ನಾಗಿ ಮಾಡದೇ ಈ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಗೂ, ನನ್ನ ಮಗನ ಮರಣಕ್ಕೂ, ಎದುರುದಾರನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಮಗ ಮಧ್ಯಪಾನ ಮಾಡಿ, ಆತನ ತಪ್ಪಿನಿಂದ ಮರಣ ಹೊಂದಿದ್ದು, ಯಾವುದೇ ಪರಿಹಾರ ನೀಡಲು ಎದುರುದಾರ ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.